ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಸುದ್ದಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 8/1/2020

# ಗೋವಾ ವಿಧಾನಸಭೆಯಲ್ಲಿ ಮಹದಾಯಿ ಗದ್ದಲ



ಗೋವಾ ವಿಧಾನಸಭೆಯಲ್ಲಿ ಮಹದಾಯಿ ಪರ ಘೋಷಣಾ ಪತ್ರ ಪ್ರದರ್ಶಿಸಿದ ಶಾಸಕರು.

**ಪಣಜಿ:** ಗೋವಾ ವಿಧಾನಸಭಾ ವಿಶೇಷ ಅಧಿವೇಶನದ ದಿನ ಮಂಗಳವಾರ ಮಹದಾಯಿ ನದಿ ನೀರು ವಿಷಯ ಪ್ರಸ್ತಾಪಿಸಿದ ಪ್ರತಿಪಕ್ಷಗಳು ಚರ್ಚೆಗೆ ಅವಕಾಶ ಕಲ್ಪಿಸಿ ಇನ್ನೊಂದು ದಿನ ಅಧಿವೇಶನ ವಿಸ್ತರಿಸುವಂತೆ ಆಗ್ರಹಿಸಿ ತೀವ್ರ ಗದ್ದಲ ನಡೆಸಿದವು. ಆದರೆ, ಸಭಾಪತಿ ರಾಜೇಶ್ ಪಾಟ್ನೇಕರ್ ಇದಕ್ಕೆ ಅವಕಾಶ ನೀಡದೆ ಅಧಿವೇಶನವನ್ನು ಫೆ.3ಕ್ಕೆ ಮುಂದೂಡಿದರು.

ಇದರಿಂದ ಕೆರಳಿದ ಕಾಂಗ್ರೆಸ್, ಗೋವಾ ಫಾರ್ವರ್ಡ್ ಮತ್ತು ಎಂಜಿಪಿ ಪಕ್ಷಗಳ ಶಾಸಕರು ತೀವ್ರ ಗದ್ದಲ ಆರಂಭಿಸಿದರು. 'ಅಮ್ಚಿ ಮಹದಾಯಿ ಅಮ್ಕಾ ಜಾಯ್' (ನಮ್ಮ ಮಹದಾಯಿ ನಮಗೆ ಬೇಕು) ಎಂಬ ಪೋಸ್ಟರ್ ಹಿಡಿದು ಘೋಷಣೆ ಕೂಗಿದರು. ''ಮಹದಾಯಿ ನದಿ ನೀರು' ನಮಗೆ ಅತ್ಯಂತ ಮುಖ್ಯ. ಅದನ್ನು ಕರ್ನಾಟಕ ತಿರುಗಿಸಿಕೊಳ್ಳುವುದನ್ನು ತಡೆಯಬೇಕಿದೆ. ಈ ಬಗ್ಗೆ ಅಧಿವೇಶನದಲ್ಲಿ ಚರ್ಚೆಯಾಗಬೇಕು'', ಎಂದು ಪ್ರತಿಪಕ್ಷದ ನಾಯಕ ದಿಗಂಬರ್ ಕಾಮತ್ ಪಟ್ಟುಹಿಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ''ಮಹದಾಯಿ ನದಿ ನನಗೆ ತಾಯಿಗಿಂತ ಹೆಚ್ಚು'', ಎಂಬ ಮಾತನ್ನು ಪುನರುಚ್ಚರಿಸಿದರು. ''ಮಹದಾಯಿ ನದಿ ಉಳಿವಿಗಾಗಿ ನಾನು ಏನು ಬೇಕಾದರೂ ಮಾಡಲು ಸಿದ್ಧನಿದ್ದೇನೆ'', ಎಂದರು.

''ಇದು ಕೇಂದ್ರ ಸರಕಾರದ ತಿದ್ದುಪಡಿ ವಿಧೇಯಕ ಅಂಗೀಕರಿಸಲು ಕರೆದ ವಿಶೇಷ ಅಧಿವೇಶನವಾಗಿರುವುದರಿಂದ ಅಧಿವೇಶನ ಕಲಾಪವನ್ನು ಇನ್ನೊಂದು ದಿನ ಮುಂದುವರಿಸಲು ಸಾಧ್ಯವಿಲ್ಲ'', ಎಂದು ಸಭಾಪತಿ ರಾಜೇಶ್ ಪಾಟ್ನೇಕರ್ ಸ್ಪಷ್ಟವಾಗಿ ಹೇಳಿದರು.

10